ಬೇರೆಯಾಗಿದೆ ಅನ್ನುವುದನ್ನು ಈ ಅನುವಾದ ಪ್ರಕ್ರಿಯೆ ನನಗೆ ಕಾಣಿಸಿತು. ಹಾಗಾಗಿ ಒಂದೇ ಕತೆ ಒಂದೇ ರೀತಿಯ ಕತೆಗಾರರು ಅನ್ನುವುದೆಲ್ಲ ಅಷ್ಟು ಸಮಂಜಸ ಅಂತ ನನಗನ್ನಿಸುವುದಿಲ್ಲ. ಸೂಕ್ಷ್ಮವಾಗಿ ನೋಡಿದಾಗ ಕಾಣುವ ಚಿತ್ರಗಳು ಬೇರೆಯಾಗಿರುತ್ತವೆ.

- **ನೀವು ಕತೆಯ ತಂತ್ರದ ಬಗ್ಗೆ ವಿಶೇಷ ಕಾಳಜಿ ವಹಿಸುವವರು. ಒಂದು ಕತೆಯಿಂದ ಮತ್ತೊಂದು ಕತೆಗೆ ಅಥವಾ ಕಾದಂಬರಿಗೆ ನಮ್ಮ ಅನುಭವ ಪ್ರಪಂಚ ಬದಲಾಗುತ್ತ ಹೋದಂತೆ ತಂತ್ರವು ಹೇಗೆ ಬದಲಾಗುತ್ತದೆ? ಅಲ್ಲಿ ನೀವು ಯಾವ ರೀತಿಯ ಸವಾಲುಗಳನ್ನ ಎದುರಿಸುತ್ತೀರಿ? ಏನು ಮಾಡಿದರೂ ಈ ಕತೆಯನ್ನು ನನ್ನಿಂದ ಹೇಳಲಾಗುತ್ತಿಲ್ಲ ಅಂತ ಕೈಬಿಟ್ಟ ಕತೆಗಳಿದ್ದಾವೆಯೇ?**

ತಂತ್ರವನ್ನು ಕತೆಯಿಂದ ಬೇರ್ಪಡಿಸಿ ನೋಡಬಾರದು. ಉತ್ತಮ ಕತೆಯಲ್ಲಿ ಅದು ಗುರುತಿಸಲಿಕ್ಕಾಗದ ಹಾಗೆ ಬೆರೆತಿರುತ್ತದೆ. ಕತೆಗೆ ನಿರೂಪಣೆಯ ಒಂದು ಬಿಂದು ಇರುತ್ತದೆ. ಅದು ಬಹಳ ಮುಖ್ಯ. ಕ್ಯಾಮೆರಾಗೆ ಒಂದು ಪೊಸಿಶನ್ ಇದ್ದ ಹಾಗೆ. ಆ ಕೋನದಿಂದ ಕೆಲವೊಂದು ಸಂಗತಿಗಳು ಕಾಣುತ್ತವೆ, ಕೆಲವು ಕಾಣುವುದಿಲ್ಲ. ಆ ಬಿಂದುವನ್ನು ನಿರ್ಧರಿಸುವುದೇ ಅತ್ಯಂತ ಮುಖ್ಯವಾದದ್ದು. ನಿರೂಪಕನ ಕಣ್ಣಿನಿಂದ ನೋಡಿದಾಗ ಯಾವುದು ಕಾಣುವುದಿಲ್ಲ ಎಂಬುದನ್ನು ಕಂಡುಕೊಳ್ಳುವುದು ಕತೆಗೆ ಅತ್ಯಂತ ಮುಖ್ಯ. ಕತೆಗೆ ಅನುರಣನ ಶಕ್ತಿ ಬರುವುದು ಹೇಳದಿರುವ ಮಾತುಗಳಿಂದ. ಉದಾಹರಣೆಗೆ ಅನ್‌ರಿಲೆಯಬಲ್ ನರೇಟರ್ ಇರುವ ಕತೆಗಳನ್ನು ತೆಗೆದುಕೊಳ್ಳಿ. ಮೇಲ್ನೋಟಕ್ಕೆ ನೀವು ನಿರೂಪಕನನ್ನು ನಂಬುತ್ತಿರುತ್ತೀರ ಆದರೆ ಅವನೊಳಗೆ ಸಾಕಷ್ಟು ಬಿರುಕುಗಳಿರುತ್ತವೆ. ಅನಂತಮೂರ್ತಿಯವರ 'ಸೂರ್ಯನ ಕುದುರೆ', ಲಂಕೇಶರ 'ಸಹಪಾಠಿ', ಚಿತ್ತಾಲರ 'ಕತೆಯಾದಳು ಹುಡುಗಿ' ಇದಕ್ಕೆ ಉತ್ತಮ ಉದಾಹರಣೆಗಳು. ನಿರೂಪಣೆಯ ಇಂಥ ಅನಿವಾರ್ಯತೆಯನ್ನು, ಕೇವಲ ತಂತ್ರವೆಂದು ಬೇರ್ಪಡಿಸಿ ನೋಡುವುದು ಸಾಧ್ಯವಿಲ್ಲವೆನ್ನುವುದನ್ನು ಅರ್ಥಮಾಡಿಕೊಳ್ಳಬೇಕಾದರೆ ಇವೇ ಕತೆಗಳನ್ನು ಬೇರೆ ಬಗೆಯಲ್ಲಿ ಬರೆಯಲು ಪ್ರಯತ್ನಿಸಬೇಕು. ನಮ್ಮ ಹೊಸ ಕತೆಗಾರರು ಇಂತಹ ಕೆಲವು ಚಟುವಟಿಕೆಗಳನ್ನು ಬರವಣಿಗೆಯ ಕಸುಬು ಕೈಗೂಡಿಸಿಕೊಳ್ಳಲು ಮಾಡಬಹುದು.

- **ಹೇಳಲಿಕ್ಕಾಗದೆ ಉಳಿದುಕೊಂಡಂಥ ಕತೆಗಳು?**

ಇದ್ದಾವೆ. ಕೆಲವನ್ನು ಬರೆಯಲು ಪ್ರಯತ್ನಿಸಿದ್ದೇನೆ ಕೂಡ. ವಿಫಲವಾದವುಗಳನ್ನು ಕೈಬಿಟ್ಟಿದ್ದೇನೆ. ಇನ್ನೊಮ್ಮೆ ಸರಿಯಾದ ಸಮಯ ಬರಬಹುದೆಂದು ಕಾಯುವುದಷ್ಟೇ. ನನ್ನಲ್ಲಿ ಹೀಗೆ ದಡ ದಾಟದ ಎಷ್ಟೋ ಕತೆಗಳಿವೆ.

- **ಇದು ಸಾಧ್ಯವಾಗಬೇಕಾದರೆ ಕತೆಗಾರನಿಗೆ ತನ್ನ ಕತೆಯಿಂದ ಒಂದು ಬಗೆಯ ಎಮೋಶನಲ್ ಡಿಸ್ಟನ್ಸ್ ಇಟ್ಟುಕೊಳ್ಳಬೇಕು. ಇದು ಬಹಳ ಕಷ್ಟ. ಒಂದು ಬಗೆಯ ಭಾವುಕತೆ ನಮ್ಮ ಕತೆಗಳ ಬಗೆಗಿರುತ್ತದೆ. ಹಾಗಾಗಿ ಕತೆಗಳನ್ನು ಬಿಟ್ಟುಕೊಡುವುದು ಕಷ್ಟ.**

ಬಿಟ್ಟುಕೊಡುವುದು ಅನ್ನುವುದಕ್ಕಿಂತ, ಇಷ್ಟೊಂದು ಶ್ರಮ ಹಾಕಿಯೂ ವ್ಯರ್ಥ ಆಯ್ತಲ್ಲ ಅಂತನ್ನಿಸುತ್ತೆ. ಆದರೆ ಪ್ರಕಟವಾಗದಿದ್ದ ಮಾತ್ರಕ್ಕೆ ಕತೆ ವ್ಯರ್ಥವಾಗಲ್ಲ. ಅದು ನಮ್ಮ ಮಿತಿಗಳ ಬಗ್ಗೆ ಏನನ್ನೋ ಕಲಿಸಿರತ್ತೆ. ಪ್ರಕಟಣೆಯೇ ಬರವಣಿಗೆಯ ಅಂತಿಮ ಗುರಿಯಲ್ಲ. ಕೆಲವನ್ನು ರಿಯಾಜ್‌ನಂತೆ ಮಾಡುತ್ತ ಇರಬೇಕಾಗುತ್ತದೆ. ಮತ್ತೆ, ತಮ್ಮ ಕತೆ ಚೆನ್ನಾಗಿದೆಯೋ ಇಲ್ಲವೋ ಅನ್ನುವುದು ಬರೆದವರಿಗೆ ಗೊತ್ತಿರುತ್ತೆ. ಹಾಗೆ ಗೊತ್ತಾಗದಿರುವವರು ಒಳ್ಳೆಯ ಕತೆಗಾರರಾಗಲು ಸಾಧ್ಯವಿಲ್ಲ. ಒಳ್ಳೆಯ ಕತೆಗಾರ ಒಳ್ಳೆಯ ವಿಮರ್ಶಕ ಕೂಡ ಎಂಬುದರ ಅರ್ಥ ಇದೇ ಹೊರತು ಆತ/ಆಕೆ ಒಳ್ಳೆಯ ವಿಮರ್ಶೆ ಬರೆಯುತ್ತಾರೆಂದಲ್ಲ.